# ಕರ್ನಾಟಕ ರಾಜ್ಯಪತ್ರ

## ಅಧಿಕೃತವಾಗಿ ಪ್ರಕಟಿಸಲಾದುದು
## ವಿಶೇಷ ಪತ್ರಿಕೆ

---

ಭಾಗ – IV A ಬೆಂಗಳೂರು, ಶುಕ್ರವಾರ, ಮೇ 2, 2003 (ವೈಶಾಖ 12, ಶಕ ವರ್ಷ 1925 ನಂ. 468

---

### ಶಿಕ್ಷಣ ಸಚಿವಾಲಯ
### ಸುತ್ತೋಲೆ

ಸಂಖ್ಯೆ : ಇಡಿ:117:ಪಿಜಿಸಿ:2003, ಬೆಂಗಳೂರು, ದಿನಾಂಕ 28ನೇ ಏಪ್ರಿಲ್ 2003

ವಿಷಯ : ಮಾನ್ಯತೆ ಪಡೆದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವಂತಿಗೆ ವಸೂಲಾತಿಯನ್ನು ತಡೆಗಟ್ಟುವ ಬಗ್ಗೆ.

ಪ್ರಸ್ತುತ ವರ್ಷದ, ಅಂದರೆ, 2003–04ನೇ ವರ್ಷದ ಶಾಲಾ ದಾಖಲಾತಿಗಳು ಆರಂಭವಾಗಿವೆ. ಮಾನ್ಯತೆ ಪಡೆದ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ದಾಖಲಾತಿಗಳೂ ಸಹ ನಡೆಯುತ್ತಿವೆ. ಈ ಶಾಲೆಗಳು ದಾಖಲಾತಿಗಾಗಿ ವಂತಿಗೆಯನ್ನು ಪಾವತಿ ಮಾಡಬೇಕೆಂದು ಪೋಷಕರನ್ನು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

2. ವಂತಿಗೆಯ ವಸೂಲಾತಿಯನ್ನು ಕಾನೂನಿನ ಅನ್ವಯ ನಿಷೇಧಿಸಲಾಗಿದೆ. ಅದಕ್ಕೆ ಸಂಬಂಧಿಸಿದ ಉಪಬಂಧಗಳ ಉದ್ಧೃತ ಭಾಗವನ್ನು ಈ ಸುತ್ತೋಲೆಗೆ ಲಗತ್ತಿಸಿದೆ. ಆ ಉಪಬಂಧಗಳ ಅನ್ವಯ, ಇತರೇ ವಿಷಯಗಳ ಜೊತೆಗೆ, ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳು ವಂತಿಗೆಯನ್ನು (ಅದನ್ನು ಯಾವುದೇ ಹೆಸರಿನಲ್ಲಿ ಕರೆಯುತ್ತಿದ್ದರೂ) ವಸೂಲಿ ಮಾಡುವಂತಿಲ್ಲ. ಸರ್ಕಾರ ನಿಗದಿಪಡಿಸಿದ ಬಾಬ್ತುಗಳಿಗಾಗಿ ಹಾಗೂ ಅವುಗಳಿಗಾಗಿ ನಿಗದಿಪಡಿಸಿದ ದರಗಳಲ್ಲಿ ಮಾತ್ರ ಶುಲ್ಕವನ್ನು (fees) ವಸೂಲಿ ಮಾಡತಕ್ಕದ್ದೆಂದೂ ಸಹ ಸದರಿ ಉಪಬಂಧಗಳ ಅನ್ವಯ ವಿಧಿಸಲಾಗಿದೆ.

3. ಈ ಸುತ್ತೋಲೆಗೆ ಲಗತ್ತಿಸಿದ ಅನುಬಂಧದಲ್ಲಿ ಉಲ್ಲೇಖಿಸಿದ 1995ರ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಕ್ರಮಬದ್ಧತೆ ಹಾಗೂ ಪಠ್ಯಕ್ರಮ ಇತ್ಯಾದಿಯ ನಿಗದೀಕರಣ), ನಿಯಮಗಳ ನಿಯಮ 15 ಮತ್ತು 16ರ ಪ್ರಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿಯೊಂದು ಜಿಲ್ಲೆಗಾಗಿ ಪ್ರಾಧಿಕಾರ ಒಂದನ್ನು ರಚಿಸಲಾಗಿದೆ. ನಿಗದಿಪಡಿಸಿದ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕವನ್ನು ವಂತಿಗೆ ಇತ್ಯಾದಿಯ ರೂಪದಲ್ಲಿ ಯಾವುದೇ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ ಅದಕ್ಕೆ ಪಾವತಿ ಮಾಡಬೇಕೆಂದು ಕೇಳಿದಲ್ಲಿ, ಅಂತಹ ಪ್ರಕರಣದಲ್ಲಿ, ಸದರಿ ನಿಯಮಗಳ ನಿಯಮ 16ರಡಿ ರಚಿಸಲಾದ ಜಿಲ್ಲಾ ಮಟ್ಟದ ಶಿಕ್ಷಣ ಕ್ರಮಬದ್ಧತೆ ಪ್ರಾಧಿಕಾರ ಅಥವಾ ಹೆಚ್ಚುವರಿ ಕ್ರಮಬದ್ಧತೆ ಪ್ರಾಧಿಕಾರಕ್ಕೆ ದೂರು ನೀಡಲು ಆಸ್ಪದ ಇರುತ್ತದೆ. ಅಂತಹ ದೂರಿನ ಆಧಾರದ ಮೇಲೆ ಅಥವಾ ತಾವೇತಾವಾಗಿ (suo-moto) ಸದರಿ

ಪ್ರಾಧಿಕಾರ ತನಿಖೆಯನ್ನು ನಡೆಸಿ ಸಂಬಂಧಿಸಿದ ಸಂಸ್ಥೆಯ ವಿರುದ್ಧ ಆದೇಶ ನೀಡಲು ಅಧಿಕಾರ ಹೊಂದಿರುತ್ತದೆ.

4. ಸದರಿ ಪ್ರಾಧಿಕಾರಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ವಿಶೇಷವಾಗಿ, ತಾವೇ ತಾವಾಗಿ (suo-moto) ಕ್ರಮ ತೆಗೆದುಕೊಳ್ಳಲು ಲಭ್ಯ ಇರುವ ಅಧಿಕಾರವನ್ನು ಸದರಿ ಪ್ರಾಧಿಕಾರಗಳು ಚಲಾಯಿಸುತ್ತಿಲ್ಲ ಎನ್ನುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ.

5. ವಂತಿಗೆಯ ವಸೂಲಿಯನ್ನು ತಡೆಗಟ್ಟಬೇಕೆಂದು ಹಾಗೂ ಅದನ್ನು ವಸೂಲಿ ಮಾಡುವ (ಮಾನ್ಯತೆ ಪಡೆದ) ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಮಾನುಸಾರ ಶಿಕ್ಷಿಸಿ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಅದರಿಂದ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕೆನ್ನುವುದು ಸರ್ಕಾರದ ಆದ್ಯತೆ ಆಗಿದೆ. ಈ ಹಿನ್ನಲೆಯಲ್ಲಿ, ಸದರಿ ಪ್ರಾಧಿಕಾರಿಗಳಿಗೆ ತಾವೇ ತಾವಾಗಿ (suo-moto) ಕ್ರಮ ತೆಗೆದುಕೊಳ್ಳಲು ಲಭ್ಯವಿರುವ ಅಧಿಕಾರವನ್ನು ಚಲಾಯಿಸಬೇಕೆಂದು ಈ ಮೂಲಕ ಸೂಚಿಸಿದೆ. ಇದಕ್ಕಾಗಿ, ಪ್ರಾಧಿಕಾರದ ಅಧ್ಯಕ್ಷರುಗಳಾದ ಜಿಲ್ಲಾಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿಗಳಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳು ವಿಶೇಷ ಆಸಕ್ತಿ ವಹಿಸಿ, ತಕ್ಷಣ ಕ್ರಮ ಆರಂಭಿಸಬೇಕೆಂದು ಸೂಚಿಸಿದೆ.

6. ತೆಗೆದುಕೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ಅಂದರೆ, ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಇವರಿಗೆ, ವರದಿಯನ್ನು ನೀಡತಕ್ಕದೆಂದು ಸಹ ಸೂಚಿಸಿದೆ.

ಎ.ಪಿ.ಜೋಷಿ
ಸರ್ಕಾರದ ಕಾರ್ಯದರ್ಶಿ,
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ),
ಶಿಕ್ಷಣ ಇಲಾಖೆ.

**ದಿನಾಂಕ 28ನೇ ಏಪ್ರಿಲ್ 2003ರ ಸುತ್ತೋಲೆ ಸಂಖ್ಯೆ : ಇಡಿ:117:ಪಿಜಿಸಿ:2003ಗೆ ಲಗತ್ತಿಸಿದ ಅನುಬಂಧ**

**ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 48ರ ಉಪ ಸೆಕ್ಷನ್ (1) ಅನ್ನು ಈ ಕೆಳಗೆ ಉದ್ಧರಿಸಿದೆ:–**

**"48 Fees - (1) Subject to any other law for the time being in force, no governing council of a recognized educational institution shall levy or collect any fees or charges or donations or other payments, by whatever name called, save such and at such rate and in such manner as may be prescribed".**

2. ಅದರ ಅಡಿಯಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ಕ್ರಮಬದ್ಧತೆ ಹಾಗೂ ಪಠ್ಯಕ್ರಮ ಇತ್ಯಾದಿಯ ನಿಗದೀಕರಣ) ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕೆಲವು ಶುಲ್ಕ ಹಾಗೂ ವಂತಿಗೆಗಳ ಕ್ರಮಬದ್ಧತೆ) ನಿಯಮಗಳು, 1999 ಅನ್ನು ರಚಿಸಲಾಗಿದೆ.

3. 1995ರ ಸದರಿ ನಿಯಮದ ನಿಯಮ 15 ಮತ್ತು 16ರ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ಧರಿಸಿದೆ:–

**"15. Violation of Rules regarding admission fees, or any provisions in the Act or Rules by the Institution - (1) Any parent who is aggrieved by :-**

**(a) Violation of any of the provisions of these rules with respect to admissions by the institutions;**
**(b) Violation of any of the provisions of these rules with respect to collection of fees: may file a petition in writing to the District level education regulating authority constituted under rule 16.**

**(2) "The District Regulating Authority may also suo-moto or on complaint made by any person interested orally or otherwise make an enquiry to satisfy themselves as to the correctness of the complaint and may pass orders as it may consider fit, after giving an opportunity to the party adversely affected by it an opportunity of making representation".**

**16. Constitution and Functions of District level education regulating authority – (1) There shall be a District level education regulating authority (hereinafter called the regulating authority) for every district consisting of the following members, namely :-**

| | | |
|---|---|---|
| **(a)** | **Deputy Commissioner of the District** | **Chairman** |
| **(b)** | **Chief Executive Officer Zilla Panchayat** | **Member** |
| **(c)** | **Executive Engineer Zilla Panchayat** | **Member** |
| **(d)** | **Deputy Director Pre-University Education Department of the concerned district** | **Member** |
| **(e)** | **Deputy Director of Public Instruction of the Concerned district** | **Member Secretary** |

**2) The State government may by notification, constitute an additional authority in a district provisions of rules 3 to 8 shall apply mutatis-mutandis to additional regulating authority.**

**3) The terms of reference of the Regulating authority shall be as follows :-**

**(1) Jurisdiction :**

**The authority shall have jurisdiction over all the instances pertaining to violation of the rules by the Educational Institutions consisting of Pre-primary and secondary institutions in a District.**

**(II) Term of reference:**

**1. The authority shall have power to investigate into all the instances as contemplated in rule 15".**

This document was created with Win2PDF available at http://www.daneprairie.com.
The unregistered version of Win2PDF is for evaluation or non-commercial use only.